# ಹತ್ತು ಸಾಕೆಂದ ಲೋಕೇಶ್


ಲೋಕೇಶ್ ಕನಕರಾಜ್, ಕಮಲ ಹಾಸನ್

ಯಶಸ್ಸಿನ ಪಥದಲ್ಲಿ ಅಡಿಯಿಟ್ಟವರ ಕುರಿತು ಬರೆಯುವಾಗ, 'ಅವರು ಮತ್ತೆ ಹಿಂದಿರುಗಿ ನೋಡಲಿಲ್ಲ' ಎನ್ನುವ ವಾಕ್ಯ ಹುಟ್ಟುವುದು ಸಾಮಾನ್ಯ. ತಮಿಳು ನಿರ್ದೇಶಕ ಲೋಕೇಶ್ ಕನಕರಾಜ್ ಇದನ್ನು ಒಪ್ಪುವುದಿಲ್ಲ. ಹಾಗೆ ನೋಡಿದಲ್ಲಿ ಇನ್ನೊಂದು ಸಿನಿಮಾ ಮಾಡುವುದೇ ಕಷ್ಟವಾದೀತೆಂಬ ಆತಂಕ ಅವರದು.

ಇತ್ತೀಚೆಗೆ ಲೋಕೇಶ್ ಮುಂದಿನ ಯೋಜನೆ ಕುರಿತು, 'ಒಂದು ಹತ್ತು ಸಿನಿಮಾ ಮಾಡಿ, ಸುಮ್ಮನಾಗಿಬಿಡೋಣ ಅಂದುಕೊಂಡಿದೀನಿ' ಎನ್ನುತ್ತಾರೆ. ಲೋಕೇಶ್ ಇರುವುದೇ ಹಾಗೆ. ಮೊದಲು ಕಿರುಚಿತ್ರಗಳನ್ನು ಮಾಡುತ್ತಿದ್ದರು. ಸಿನಿಮಾ ಪ್ರವೇಶಿಸಿದ್ದು ಅಲ್ಲಿನ ಅನುಭವದಿಂದಲೇ. ಅವರ 'ಖೈದಿ' ತಮಿಳು ಸಿನಿಮಾ ಯಶಸ್ಸು ದಕ್ಕಿಸಿಕೊಟ್ಟಿತು. 'ಮಾಸ್ಟರ್' ಸೂಪರ್ ಹಿಟ್ ಆಯಿತು. ಲೋಕೇಶ್ ಅವರನ್ನೇ ನೆಚ್ಚಿಕೊಂಡು ಕಮಲ ಹಾಸನ್ 'ವಿಕ್ರಮ್' ಮಾಡಿದರು. ಈಗ ವಿಜಯ್ ನಾಯಕರಾಗಿರುವ 'ಲಿಯೊ' ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ತ್ರಿಶಾ, ಸಂಜಯ್ ದತ್, ಮಿಷ್ಕಿನ್ ಇದರಲ್ಲಿ ಅಭಿನಯಿಸಿದ್ದಾರೆ.

'ನನಗೆ ಮುಂದಿನ ಹತ್ತು ವರ್ಷ ಹೀಗೇ ಮಾಡಬೇಕು ಎಂಬ ಆಲೋಚನೆ ಇಲ್ಲ. ತಕ್ಷಣದ ಕೆಲಸದಲ್ಲಿ ಸೋಲದಿದ್ದರೆ ಸಾಕು. ನನ್ನನ್ನು ನೆಚ್ಚಿಕೊಂಡು ಎಷ್ಟೋ ಜನರು ಚಿತ್ರರಂಗದಲ್ಲಿ ಇರುತ್ತಾರೆ. ಅವರಿಗೆಲ್ಲ ಯಶಸ್ಸು ನನ್ನಂತೆಯೇ ಮುಖ್ಯವಾಗಿರುತ್ತದೆ. ಒಂದು ಸಿನಿಮಾ ಗೆದ್ದರೆ ನಾವು ನಗುತ್ತೇವೆ, ಸೋತರೆ ಕಷ್ಟ ಕಷ್ಟ. ಅದಕ್ಕೇ ಹತ್ತು ಸಿನಿಮಾಗಳನ್ನು ಮಾಡಿ, ಸುಮ್ಮನೆ ನನ್ನ ಪಾಡಿಗೆ ನಾನು ಇದ್ದುಬಿಡುವೆ' ಎಂದರು. ■

# ಹನುಮನ ನೋಡಿದಿರಾ



'ಆದಿಪುರುಷ್' ಸಿನಿಮಾದ ಹನುಮಂತನೀಗ ಮನೆಮಾತು. ಕಡೆದಿಟ್ಟ ದೇಹ, ಎತ್ತರದ ನಿಲುವು, ವಿಎಫ್‌ಎಕ್ಸ್ ಅವನನ್ನು ಇನ್ನಷ್ಟು ಆಧುನೀಕೃತ ಅವತಾರದಲ್ಲಿ ತೋರಿದ್ದು... ಇವೆಲ್ಲ ಈ ಹನುಮ 'ಟಾಕ್ ಆಫ್ ದಿ ಟೌನ್' ಆಗುವಂತೆ ಮಾಡಿತು. 'ರಾಮಾಯಣ' ಧಾರಾವಾಹಿಯಲ್ಲಿ ದಾರಾಸಿಂಗ್ ಅವರನ್ನು ನೋಡಿಯೇ ಹುಬ್ಬೇರಿಸಿದ್ದ ಜನರಿಗೆ 'ಆದಿಪುರುಷ್' ಹನುಮ ಕಾರ್ಟೂನ್‌ನಂತೆ ಕಂಡಿದ್ದೂ ಸುಳ್ಳಲ್ಲ. ಧಾರಾವಾಹಿ ರಾಮಾಯಣದಲ್ಲಿ ಶ್ರೀರಾಮನ ಪಾತ್ರಧಾರಿಯಾಗಿದ್ದ ಅರುಣ್ ಗೋವಿಲ್ ಕಣ್ಣು ಈ ಹನುಮನ ಗಡ್ಡದ ಮೇಲೆ ಬಿತ್ತು. 'ಹನುಮನಿಗೇಕೆ ಗಡ್ಡ ಅಂಟಿಸಿದಿರಯ್ಯಾ' ಎಂದು ಅವರು ಇನ್ನೊಂದು ಮಾತಿನ ಬಾಣ ಬಿಟ್ಟರು. ಇಷ್ಟೆಲ್ಲ ಪಾತ್ರ ಲಂಘನಕ್ಕೆ ಕಾರಣವಾದವರು ದೇವದತ್ತ ನಾಗೆ. ಮರಾಠಿಯ ಬಾಡಿಬಿಲ್ಡರ್ ಕಂ ಸಿನಿಮಾ ನಟ.

ದೇವದತ್ತ ನಾಗೆ ಸಾಮಾಜಿಕ ಜಾಲತಾಣಗಳನ್ನು ಇಣುಕಿದರೆ, ಅವರ ವರ್ಕ್‌ಔಟ್‌ನ ವಿವಿಧ ಭಂಗಿಯ ಫೋಟೊಗಳು ರಾಚುತ್ತವೆ. ದೇಹಾಕಾರವನ್ನು ಅವರು ಹೇಗೆಲ್ಲ ಮಾರ್ಪಡಿಸುತ್ತಾ ಬಂದಿದ್ದಾರೆ ಎನ್ನುವ ಅಂದಾಜೂ ಸಿಗುತ್ತದೆ. ಕಸರತ್ತನ್ನೇ ಉಸಿರಾಡುವ ಇವರು 'ಜೈ ಮಲ್ಹಾರ್' ಎಂಬ ಮರಾಠಿ ಧಾರಾವಾಹಿಯಲ್ಲಿ ಖಂಡೋಬಾ ದೇವರ ಪಾತ್ರದಲ್ಲಿ 2014ರಿಂದ 2017ರವರೆಗೆ ಅಭಿನಯಿಸಿದರು. ಅದಕ್ಕೂ ಮೊದಲು 2011ರಲ್ಲಿ 'ವೀರ್ ಶಿವಾಜಿ' ಎಂಬ ಧಾರಾವಾಹಿಯಲ್ಲಿ ತಾನಾಜಿ ಮಲುಸಾರೆ ಪಾತ್ರದಲ್ಲೂ ನಟಿಸಿದ್ದರು. 'ಸಂಘರ್ಷ್' ಮರಾಠಿ ಸಿನಿಮಾ ಹಾಗೂ 'ಒನ್ಸ್ ಅಪಾನ್ ಎ ಟೈಮ್ ಇನ್ ಮುಂಬೈ–ದುಬಾರಾ' ಹಿಂದಿ ಸಿನಿಮಾಕ್ಕೆ ಅವಕಾಶ ಸಿಕ್ಕಿದ್ದೂ 2013–14ರಲ್ಲಿ. ಅದಾದ ಮೇಲೆ ಅವರು ಓಂ ರಾವುತ್ ಕಣ್ಣಿಗೆ ಬಿದ್ದರು. 'ಸತ್ಯಮೇವ ಜಯತೆ', 'ತಾನ್ಹಾಜಿ' ಸಿನಿಮಾಗಳಲ್ಲಿ ಅವಕಾಶ ಕೊಟ್ಟರು. ಹನುಮಂತನ ಪಾತ್ರಕ್ಕೆ ಬೇಕಾದ ದೇಹಾಕಾರ ಇರುವ ಕಾರಣಕ್ಕೆ ಅದೇ ನಿರ್ದೇಶಕರು 'ಆದಿಪುರುಷ್'ನಲ್ಲೂ ಅವಕಾಶವಿತ್ತರು.

ಚಿತ್ರೀಕರಣ ಶುರುವಾದಾಗ ದೇವದತ್ತ ಸಂಭಾಷಣೆಕಾರ ಮನೋಜ್ ಮುಂಟಾಶಿರ್ ಅವರನ್ನು ಬಾಯಿತುಂಬಾ ಹೊಗಳಿದ್ದರು. ದೈವಾಂಶ ಇಲ್ಲದೇ ಹೋದರೆ ಈ ರೀತಿಯ ಸಂಭಾಷಣೆ ಬರೆಯುವುದು ಅಸಾಧ್ಯ ಎಂದೆಲ್ಲ ಬಣ್ಣಿಸಿದ್ದರು. ಪ್ರತಿನಿತ್ಯವೂ ಚಿತ್ರೀಕರಣ ಶುರುವಾಗುವ ಮೊದಲು 'ಜೈ ಶ್ರೀರಾಮ್' ಎಂದು ಜಪಿಸಿಯೇ ಮುಂದಡಿ ಇಡುತ್ತಿದ್ದುದಾಗಿಯೂ ಹೇಳಿಕೊಂಡಿದ್ದರು. ಈಗ ಅದೇ ಸಂಭಾಷಣಕಾರ ಹನುಮಂತನ ಪಾತ್ರದ ಬಾಯಲ್ಲಿ ಹೊಸಕಾಲದ ನುಡಿಗಟ್ಟುಗಳನ್ನು ಹಾಕಿ, ಟೀಕೆಗೆ ಗುರಿಯಾದರು. ಕೆಲವು ಸಂಭಾಷಣೆಗಳನ್ನೂ ಬದಲಿಸಿದರು. ಇದು ರಾಮಾಯಣದ ಸ್ಫೂರ್ತಿಯಷ್ಟೆ ಎಂದು ಜಾರಿಕೊಂಡಿದ್ದಾರೆ. ಈ ಎಲ್ಲ ಬೆಳವಣಿಗೆಗಳ ಮಧ್ಯೆಯೇ ದೇವದತ್ತ ಕೂಡ ಮಾತಿನ ಕೂರಂಬುಗಳಿಗೆ ಎದುರಾಗುತ್ತಿದ್ದಾರೆ. ■

